

# ಕಳೆದ ದಿನಗಳ ನೆನಪುಗಳು

(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)



ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

## ಭಾಗ ೩೭

ಮುಂಬೈ ಪಾರ್ಸಿ ಜನಾಂಗದ ಅವಿವಾಹಿತ ಮ್ಯಾಜಿಸ್ಟ್ರೇಟ್ ಒಬ್ಬರು ಮಠದ ಆದರ್ಶಗಳಿಂದ ಆಕರ್ಷಿತರಾಗಿ ಎರಡು ತಿಂಗಳ ಹಿಂದೆ ಬೇಲೂರು ಮಠದಲ್ಲಿ ಕೆಲವೊಂದು ದಿನ ಉಳಿದು ಕೊಂಡಿದ್ದರು. ಮಠದಲ್ಲಿ ವಿರಜಾನಂದರೊಂದಿಗೆ ಮಾತನಾಡಿ ತುಂಬ ಇಷ್ಟವಾಗಿತ್ತು, ಹಾಗೂ ಅವರಿಂದ ಆಧ್ಯಾತ್ಮಿಕ ಸಾಧನೆಗೆ ಬೇಕಾದ ಮಾರ್ಗದರ್ಶನ ಬೇಕೆಂದು ಪ್ರಾರ್ಥಿಸಿದ್ದರು. ಆದರೆ ಮಠದಲ್ಲಿ ಅದು ಸಾಧ್ಯವಾಗಿರಲಿಲ್ಲ. ಆ ಉದ್ದೇಶವನ್ನಿಟ್ಟು ಕೊಂಡೇ ಅವರೀಗ ಕುರ್ಸಿಯಾಂಗಿಗೆ ಬಂದಿದ್ದಾರೆ! ಆತನ ನಿಷ್ಕಪಟ ವ್ಯವಹಾರವನ್ನೂ, ಆಂತರಿಕ ವ್ಯಾಕುಲತೆಯನ್ನೂ ಕಂಡ ಮಹಾರಾಜರು ಬುದ್ಧಪೂರ್ಣಿಮೆಯಂದು ಆತನಿಗೆ ಮಂತ್ರ ದೀಕ್ಷೆಯನ್ನು ನೀಡಿದರು. ಆತನ ವ್ಯಕ್ತಿಗತ ದ್ವಂದ್ವವನ್ನು ಪರಿಹರಿಸ ಲೋಸುಗ ಎರಡು ದಿನಗಳು ಮಹಾರಾಜರು ಆತನೊಡನೆ ಮಾತ ನಾಡಬೇಕಾಯಿತು. ಇದಕ್ಕೆ ಡಾ. ಬಾಬುಗಳು ಆಕ್ಷೇಪಿಸುತ್ತ, ''ಮಹಾರಾಜ್, ಇಷ್ಟೊಂದು ಶ್ರಮವಹಿಸಿದರೆ ನಿಮ್ಮ ಶರೀರವು ಸುಧಾರಿಸುವುದು ಕಠಿಣ'' ಎಂದರು. ಅದಕ್ಕವರು ಮೃದುವಾಗಿ ನಕ್ಕು, ''ನಾನೇನು ಮಾಡಲಿ ಹೇಳಿ? ಪಟ್ಟುಹಿಡಿದಾಗ 'ಇಲ್ಲ' ಎಂದು ಹೇಳಲು ಸಾಧ್ಯವಿಲ್ಲ'' ಎಂದರು.

ನಿಜವಾಗಿಯೂ ಅವರು ತಾನೇ ಏನು ಮಾಡಿಯಾರು? ಅವರು ತಮ್ಮ ಹಿಂದಿನ ಸಂಘಗುರುಗಳನ್ನು ಕಂಡಿರಲಿಲ್ಲವೇನು? ಅವರೆಲ್ಲ ತಮ್ಮ ಆರೋಗ್ಯದ ಬಗ್ಗೆ ಎಷ್ಟು ತಾನೇ ಕಾಳಜಿ ವಹಿಸಿ ದ್ದರು? ಮೊದಲು ದೇಹವೆ? ಅಥವಾ ದೇವರ ಕೆಲಸವೆ? ಎಂಬುದೇ ಅವರ ಅಂಬೋಣ. ಅವರೆಲ್ಲರ ಜೀವನ ಚರಿತ್ರೆ ಯನ್ನು ಎಷ್ಟರಮಟ್ಟಿಗೆ ತಾನೇ ಈಗ ಅನುಸರಿಸಲಾಗುತ್ತಿದೆ? ವಿರಜಾನಂದರು ತಮ್ಮ ಗುರುಭಾಯಿಗಳಾದ ಕಲ್ಯಾಣಾನಂದರಿಗೆ ಒಮ್ಮೆ ವಿಷಾದದಿಂದ ಹೇಳಿದ್ದರು, ''ನಾವುಗಳು ಸ್ವಾಮೀಜಿ ಯವರ ಶಿಷ್ಯರು ಎಂದು ಹೇಳಿಕೊಳ್ಳಲು ನಾಚಿಕೆಯಾಗಬೇಕು'' ಎಂದು. ಆದ್ದರಿಂದ ಈಗ ಇಷ್ಟಾದರೂ ಮಾಡದಿದ್ದರೆ ಹೇಗೆ? ಶಂಕರಾಚಾರ್ಯರ ವಾಣಿಯನ್ನು ಮರೆಯಲಾದೀತೆ? —

**ಶರೀರಪೋಷಣಾರ್ಥೀ ಸನ್ ಯ ಆತ್ಮಾನಂ ದಿದೃಕ್ಷತಿ ।**
**ಗ್ರಾಹಂ ದಾರು-ಧಿಯಾ ಧೃತ್ವಾ ನದೀ ತರ್ತುಂ ಸ ಗಚ್ಛತಿ ॥**



''ಶರೀರಪೋಷಣಾರ್ಥಿಯಾಗಿದ್ದುಕೊಂಡು ಆತ್ಮದರ್ಶನವ ನ್ನಿಚ್ಛಿಸುವವನ ಅವಸ್ಥೆಯು, ಮೊಸಳೆಯನ್ನು ಮರದ ತುಂಡೆಂದು ಭಾವಿಸಿ ಅದನ್ನು ಅವಲಂಬಿಸಿ ನದಿಯನ್ನು ದಾಟಲನುವಾದ ಮಂದಮತಿಯಂತೆ.'' (ವಿವೇಕಚೂಡಾಮಣಿ, ೮೪)

೧೯೪೦ರ ಜೂನ್ ೧೯ರಂದು ಸ್ನಾನಯಾತ್ರೆ; ವಿರಜಾನಂದರ ೬೭ನೆಯ ಜನ್ಮದಿನ. ಸೇವಕ-ಸಂನ್ಯಾಸಿಗಳು ಸೇರಿ ಒಂದು ಸಣ್ಣ ಆನಂದೋತ್ಸವವನ್ನು ಆಯೋಜಿಸಿದ್ದರು. ಕಲ್ಕತ್ತೆಯ ಭಕ್ತ ರೊಬ್ಬರು 'ದಾರ್ಜಿಲಿಂಗ್ ಮೇಲ್'ನಲ್ಲಿ ಪ್ರಯಾಣಿಸಿ ಬೆಳಗ್ಗೆ ಕುರ್ಸಿಯಾಂಗ್ ತಲುಪುವ ವಿಚಾರವಿತ್ತು. ದಟ್ಟವಾದ ಮಂಜಿ ನಿಂದ ದಿಕ್ಕೆಲ್ಲ ಮುಚ್ಚಿಹೋಗಿತ್ತು. ಹಿಂದಿನ ರಾತ್ರಿಯಿಡೀ ಮಳೆ ಬಿದ್ದಿತ್ತು, ಈಗಲೂ ಸಹ ಹನಿಯುತ್ತಲೇ ಇದೆ. ಮಹಾರಾಜರ ಸೇವಕರೊಬ್ಬರು ಬರಲಿರುವ ಭಕ್ತರನ್ನು ಕರೆತರಲು ರೈಲ್ವೆ ಸ್ಟೇಷ

ನ್ನಿಗೆ ಹೋಗಿದ್ದಾರೆ. ಅಲ್ಲಿ ತಿಳಿದಿದ್ದೇನೆಂದರೆ, ರೈಲು ತಡವಾಗಿ ಬರಲಿದೆ ಎಂಬ ಸುದ್ದಿ. ಸೇವಕರೆಂದುಕೊಂಡರು, 'ಪಾಪ! ಆ ಭಕ್ತರು ಇಂದಿನ ಆನಂದೋತ್ಸವದಲ್ಲಿ ಪಾಲ್ಗೊಳ್ಳಲಾಗದು' ಎಂದು. ಆದರೆ ಭಕ್ತರಾದರೋ ತುಂಬ ಬುದ್ಧಿವಂತರು. ಸಿಲಿಗುರಿಯಿಂದ ಅವರು ಟ್ಯಾಕ್ಸಿಯೊಂದನ್ನು ಹಿಡಿದು ಸಮಯಕ್ಕೆ ಸರಿಯಾಗಿ ಕುರ್ಸಿಯಾಂಗ್ ತಲುಪಿಯೇಬಿಟ್ಟಿದ್ದಾರೆ! ಜೊತೆಗೆ ಅನೇಕ ತಾವರೆಹೂಗಳನ್ನು ತಂದಿದ್ದಾರೆ! ವಿರಜಾನಂದರಿಗಂತೂ ಹಿಡಿಸಲಾರದಷ್ಟು ಸಂತೋಷವಾಗಿದೆ.

ಇಂದು, ಮಹಾರಾಜರು ಬೆಳಗ್ಗೆಯೇ ಸ್ನಾನವನ್ನು ಪೂರೈಸಿದ್ದಾರೆ. ನಂತರ ಒಂದು ಗಂಟೆಯನ್ನು ಧ್ಯಾನದಲ್ಲಿ ಕಳೆದಿದ್ದಾರೆ. ಅದಾದ ಮೇಲೆ ಎಲ್ಲರೂ ಒಬ್ಬೊಬ್ಬರಾಗಿ ಬಂದು ನಮಸ್ಕರಿಸಿ, ಪ್ರಸನ್ನರಾಗಿದ್ದ ಅವರ ಆಶೀರ್ವಾದ ಪಡೆದುಕೊಂಡರು. ವಿರಜಾನಂದರಿಂದ ದೀಕ್ಷೆ ಪಡೆದಿದ್ದ ಇಬ್ಬರು ಅಮೆರಿಕನ್ ಮಹಿಳೆಯರು ದಾರ್ಜಿಲಿಂಗ್‌ನಲ್ಲಿ ವಾಸಿಸುತ್ತಿದ್ದರು. ಅವರೂ ಇಂದು ಸುಂದರವಾದ ಗುಲಾಬಿ ಗುಚ್ಛದೊಂದಿಗೆ ಕುರ್ಸಿಯಾಂಗಿಗೆ ಬಂದು ಆನಂದೋತ್ಸವದಲ್ಲಿ ಪಾಲ್ಗೊಂಡರು. ಅವರಿಗೆ ಪರಿಚಿತನಾದ ಚೀನಾದ ಕಲಾವಿದನೊಬ್ಬನೂ ಸಹ ಬಂದಿದ್ದನು.

ನಾಲ್ಕು ದಿನಗಳ ನಂತರ, ಸ್ವಾಮಿ ಪರಮಾನಂದರು ಜೂನ್ ೨೧ರಂದು ಅಮೇರಿಕೆಯ ಕೊಹಾಸೆಟ್ ಆಶ್ರಮದಲ್ಲಿ ತಮ್ಮ ದೇಹತ್ಯಾಗವನ್ನು ಮಾಡಿದ್ದಾರೆಂಬ ದುಃಖದ ವಾರ್ತೆ ಹೊತ್ತ ಟೆಲಿಗ್ರಾಂ ಒಂದು ಬಂದು ತಲುಪಿತು. ೩೪ ಸುದೀರ್ಘ ವರ್ಷಗಳ ಕಾಲ ವಿಶೇಷ ದಕ್ಷತೆಯೊಂದಿಗೆ ಅವರು ಅಮೆರಿಕಾದಲ್ಲಿ ವೇದಾಂತಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದರು. ಇವರ ಹಿಂದಿನ ಹೆಸರು ಸುರೇಶ್ ಚಂದ್ರ ಗುಹ ಠಾಕೂರದಾ ಎಂದು. ೧೯೦೦ರಲ್ಲಿ ತಮ್ಮ ೧೬ನೇ ವಯಸ್ಸಿನಲ್ಲಿ ಅವರು ಬೇಲೂರು ಮಠವನ್ನು ಸೇರಿದ್ದರು. ೧೯೦೨ರಲ್ಲಿ ಸ್ವಾಮಿ ವಿವೇಕಾನಂದರಿಂದ ಸಂನ್ಯಾಸವನ್ನು ಪಡೆದು ಸ್ವಾಮಿ ಪರಮಾನಂದರಾದರು. ವಸಂತ ಋತುವಿನ ಪ್ರಾಕೃತಿಕ ಸೌಂದರ್ಯದಂತೆ ಅವರ ಸ್ವಭಾವವು ಸಹಜ ಸುಂದರವಾಗಿತ್ತೆಂಬ ಕಾರಣದಿಂದ ಸ್ವಾಮಿ ಬ್ರಹ್ಮಾನಂದರು ಅವರ ಹೆಸರನ್ನು 'ವಸಂತ' ಎಂದಿಟ್ಟಿದ್ದರು. ಅವರು ಅಮೆರಿಕಾಗೆ ಹೋಗುವ ಮುನ್ನ ಮದ್ರಾಸಿನ ಮಠದಲ್ಲಿ ಪೂಜ್ಯ ಶಶಿ ಮಹಾರಾಜರೊಂದಿಗೆ ಕೆಲವು ವರ್ಷಗಳಿದ್ದರು. ಅಲ್ಲದೆ ಅವರ ಅಪಾರ ಪ್ರೀತಿಯನ್ನು ಗಳಿಸಿದ್ದರು. ೧೯೦೬ರ ನವೆಂಬರ್‌ನಲ್ಲಿ ಅವರು ಸ್ವಾಮಿ ಅಭೇದಾನಂದರೊಂದಿಗೆ ಮೊದಲಬಾರಿ ಅಮೆರಿಕಾಗೆ ಹೋದರು. ಶಶಿಮಹಾರಾಜರ ಅನಾರೋಗ್ಯದ ಬಗ್ಗೆ ತಿಳಿದು ಬಂದು ೧೯೧೧ರಲ್ಲಿ ಭಾರತಕ್ಕೆ ಮರಳಿದರು. ವಿಷಾದವೆಂದರೆ ಅವರು ತಲುಪುವ ಮೊದಲೇ ಶಶಿಮಹಾರಾಜರು ಮಹಾಸಮಾಧಿಯನ್ನಪ್ಪಿದ್ದರು. ಇದಾದ ನಂತರ ಮತ್ತೆ ಐದು ಬಾರಿ ಪರಮಾನಂದರು ಭಾರತಕ್ಕೆ ಬಂದಿದ್ದರು. ೧೯೩೭ರಲ್ಲಿ ಅವರು ಶ್ರೀರಾಮಕೃಷ್ಣರ ಶತಮಾನೋತ್ಸವದ ಅಂಗವಾಗಿ ನಡೆದ ವಿಶ್ವಧರ್ಮ ಮಹಾಸಮ್ಮೇಳನದಲ್ಲಿ ಭಾಗವಹಿಸಲು ಭಾರತಕ್ಕೆ ಬಂದಿದ್ದರು. ಇದೇ ಅವರ ಕೊನೆಯ ಭೇಟಿಯಾಯಿತು. ಅವರಿಗೆ ಸ್ವಾಮಿ ವಿರಜಾನಂದರ ಮೇಲೆ ಅಪಾರ ಗೌರವವಿತ್ತು. ಅವರೊಂದಿಗೆ ಪತ್ರವ್ಯವಹಾರವನ್ನು ಬಹಳವಾಗಿ ಇಟ್ಟುಕೊಂಡಿದ್ದರು. ಪತ್ರದಲ್ಲಿ ವಿರಜಾನಂದರನ್ನು ಪ್ರೀತಿಯಿಂದ 'ದಾದಾ' (ಅಣ್ಣಾ) ಎಂದು ಸಂಬೋಧಿಸುತ್ತಿದ್ದರು. ಪರಮಾನಂದರ ದೇಹತ್ಯಾಗವು ಕೆಲವೊಂದು ದಿನ ವಿರಜಾನಂದರನ್ನು ವಿಷಣ್ಣರನ್ನಾಗಿಸಿತ್ತು. ಪರಮಾನಂದರಿಂದ ಸ್ಥಾಪಿಸಲ್ಪಟ್ಟಿದ್ದಂತಹ ಕ್ಯಾಲಿಫೋರ್ನಿಯಾದ 'ಆನಂದಾಶ್ರಮ'ದ ವಾಸಿಗಳಿಗೆ ಸುದೀರ್ಘವಾದ ಪತ್ರವೊಂದನ್ನು ಬರೆದು ತಮ್ಮ ಸಹಾನುಭೂತಿಯನ್ನು ತಿಳಿಸಿ, ಸಾಂತ್ವನವನ್ನು ನೀಡಿದ್ದರು.

ಕಾರ್ಸಿಯಾಂಗ್‌ನಲ್ಲಿ ಈಗಾಗಲೇ ಎರಡೂವರೆ ತಿಂಗಳು ಕಳೆದಾಗಿದೆ. ಆದರೆ ಆರೋಗ್ಯದಲ್ಲಿ ಹೆಚ್ಚಿನ ಬದಲಾವಣೆ ಕಾಣಲಿಲ್ಲ. ಲಘು ಜ್ವರವು ಇನ್ನೂ ಬಿಟ್ಟಿರಲಿಲ್ಲ. ಮಳೆಗಾಲ ಆರಂಭವಾಗಲಿದೆ; ಕಾರ್ಸಿಯಾಂಗ್‌ನ ವಾಯು-ಜಲ ಆರೋಗ್ಯಕ್ಕೆ ಸ್ವಲ್ಪವೂ ಅನುಕೂಲಕರವಲ್ಲ. ಹಾಗಾದರೆ ಎಲ್ಲಿಗೆ ಹೋಗುವುದು? ಬೇಲೂರು ಮಠಕ್ಕೆಯೆ? ಆದರೆ ಕೆಲವು ತಿಂಗಳುಗಳಿಂದ ಬರುತ್ತಿದ್ದ ಜನಸಂದಣಿಯನ್ನು ನೆನೆಸಿಕೊಂಡರೆ ಎದೆ ನಡುಗುತ್ತದೆ. ಇನ್ನು ಶ್ಯಾಮಲಾತಾಲ್? ಡಾಕ್ಟರ್‌ಗಳ ಅನುಮತಿ ದೊರೆತುಬಿಟ್ಟರೆ ಅಲ್ಲಿಗೆ ಹೋಗಲು ಮನಸ್ಸೇನೋ ಬಹಳ ಹಾತೊರೆಯುತ್ತಿದೆ. ಅದಾದರೋ ಬಹಳ ದೂರ; ಅಲ್ಲದೆ ನುರಿತ ವೈದ್ಯರೂ ಸಿಗರು. ಆದ್ದರಿಂದ ಅಲ್ಲಿಗೆ ಹೋಗುವ ಅನುಮತಿ ಸಹಜವಾಗಿ ಸಿಗಲೊಲ್ಲದು. ಉಪಾಯ ಕಾಣದೆ ಕಾಲಿಂಪಾಂಗ್‌ಗೆ ಹೋಗುವುದೆಂದು ನಿರ್ಧರಿಸಿದರು. ಮಳೆಗಾಲದಲ್ಲಿ ಕಾಲಿಂಪಾಂಗ್‌ನ ಹವೆ ನೀರು ಅಂತಹ ಕೆಟ್ಟದ್ದೇನೂ ಅಲ್ಲ. ಅಲ್ಲಿಗೆ ಹೊರಡುವ ಮೊದಲು ಮಂಗಳೂರಿನ ವ್ಯಾಪಾರಿಗಳೊಬ್ಬರಿಗೆ ದೀಕ್ಷೆ ನೀಡಿದರು. ಈ ಭಕ್ತರು ಮಂಗಳೂರಿನ ಮತ್ತೊಬ್ಬ ಡಾಕ್ಟರರೊಂದಿಗೆ ಕೇದಾರ ಬದರೀ ಯಾತ್ರೆ ಮುಗಿಸಿಕೊಂಡು ಬೇಲೂರು ಮಠಕ್ಕೆ ಹೋಗಿದ್ದರು. ಅಲ್ಲಿ ಮಠಾಧ್ಯಕ್ಷರನ್ನು ಕಾಣದೆ, ಅವರನ್ನರಸಿಕೊಂಡು ಕಾಲಿಂಪಾಂಗ್‌ಗೇ ಹಾಜರ್! ಅದಮ್ಯ ವ್ಯಾಕುಲತೆಯುಳ್ಳ ಇಂತಹ ದೀಕ್ಷಾರ್ಥಿಯನ್ನು ವಿರಜಾನಂದರು ಹೇಗೆ ತಾನೇ ನಿರಾಕರಿಸಿಯಾರು? ಈ ವಿಷಯದಲ್ಲಿ ಶರೀರದ ಒಳಿತು ಕೆಡುಕನ್ನು ನೋಡುವುದು ಅರ್ಥಹೀನವಲ್ಲವೆ?

ಕಾಲಿಂಪಾಂಗಿನಲ್ಲಿ ಆಗಿನ್ನೂ ಆಶ್ರಮವು ಸ್ಥಾಪಿತವಾಗಿರಲಿಲ್ಲ; ಮುಂದೆ ೧೯೪೪ರಲ್ಲಿ ಸ್ವಾಮಿ ಗಂಗೇಶಾನಂದರ ಪ್ರಯತ್ನದಿಂದ ಸ್ಥಾಪಿತವಾಯಿತು. ವಿರಜಾನಂದರು ಕಾಲಿಂಪಾಂಗ್‌ನಲ್ಲಿ ಒಂದೂವರೆ ತಿಂಗಳಿದ್ದರು. ಹೆದ್ದಾರಿಯಲ್ಲಿದ್ದ ಮಹಡಿ ಮನೆಯೊಂದನ್ನು ಬಾಡಿಗೆಗೆ ತೆಗೆದುಕೊಳ್ಳಲಾಗಿತ್ತು. ಇಲ್ಲಿ ಮಹಾರಾಜರ ಆರೋಗ್ಯ ಸ್ವಲ್ಪ ಸುಧಾರಿಸಿತಾದರೂ ಲಘುಜ್ವರವು ಮಾತ್ರ ಬಿಟ್ಟಿರಲಿಲ್ಲ.

ಅವರೊಂದು ದಿನ ಡಾ. ದುರ್ಗಾಪದರನ್ನು ಕರೆದು ''ನೋಡಿದಿರಿ ತಾನೆ? ನಿಮ್ಮಗಳ ಚಿಕಿತ್ಸೆಯಿಂದಾಗಲಿ ಹವೆಯ ಬದಲಾವಣೆ ಯಿಂದಾಗಲೀ ಏನೂ ಪ್ರಯೋಜನವಾಗಲಿಲ್ಲ'' ಎಂದರು.

ಡಾಕ್ಟರ್ — ''ಅದು ಹಾಗಿದ್ದರೂ ಸಹ ಚಿಕಿತ್ಸೆಯನ್ನು ಮುಂದುವರೆಸಿಕೊಂಡು ಹೋಗಲೇ ಬೇಕು ಮಹಾರಾಜ್.''

''ಇಲ್ಲ, ನಾನು ಇನ್ನು ವೈದ್ಯರ ಮಾತನ್ನು ಕೇಳುವುದೇ ಇಲ್ಲ. ಸೀದಾ ಶ್ಯಾಮಲಾತಾಲಿಗೆ ಹೋಗಿಬಿಡುವೆ. ನೋಡುವಿರಂತೆ ಅಲ್ಲಿ ಹೋದೊಡನೆಯೇ ನಾನು ಹೇಗೆ ಸ್ವಸ್ಥನಾಗಿಬಿಡುವೆ ಎಂದು!''

ವಿರಜಾನಂದರು ಕಾಲಿಂಪಾಂಗ್‌ನಿಂದ ಮಠಕ್ಕೆ ಹೋಗದೆ, ಲಕ್ನೋಗೆ ಹೋಗಿ, ಅಲ್ಲಿಂದ ಶ್ಯಾಮಲಾತಾಲ್‌ಗೆ ಹೋಗಲು ಸಂಕಲ್ಪಿಸಿದರು. ಅದನ್ನು ಮಠಕ್ಕೆ ಬರೆದು ತಿಳಿಸಿದರು. ಆದರೆ ಸುತ್ತುಬಳಸಿನ ಈ ದಾರಿಯು ಅವರ ಈಗಿನ ಸ್ವಾಸ್ಥ್ಯಕ್ಕೆ ಇನ್ನೂ ಹೆಚ್ಚಿನ ಹಾನಿಯನ್ನುಂಟು ಮಾಡುವುದೆಂದೂ, ಅವರು ತಮ್ಮ ನಿರ್ಧಾರವನ್ನು ತ್ಯಜಿಸಬೇಕೆಂದು ಡಾ. ಅಜಿತ ಬಾಬುಗಳು ಮತ್ತು ಮಠದಲ್ಲಿ ಎಲ್ಲರೂ ಸಹ ವಿನಂತಿಸಿಕೊಂಡರು. ಆದರೆ ವಿರಜಾನಂದರ ತೀರ್ಮಾನವು ಬದಲಾಗಲಿಲ್ಲ. ಮಾರ್ಗಮಧ್ಯ ದಲ್ಲಿ ಜಲಪಾಯ್‌ಗುಡಿ, ದೀನಾಜ್‌ಪುರ್ ಮತ್ತು ಕಾಟಿಹಾರ್‌ನ ಆಶ್ರಮಗಳಲ್ಲಿ ವಿಶ್ರಾಂತಿ ಪಡೆಯುವುದರಿಂದ ಭಯಪಡು ವಂತಹುದೇನಿದೆ ಎಂಬುದು ಮಹಾರಾಜರ ಅಭಿಮತ.

ಕಾಲಿಂಪಾಂಗ್‌ನಲ್ಲಿ ಮಹಾರಾಜರು ಮತ್ತೆರಡು ಬಾರಿ ದೀಕ್ಷೆ ನೀಡಿದರು. ಹೌರಾದ ಭಕ್ತರೊಬ್ಬರು ಮಹಾರಾಜ್ ಅಧ್ಯಕ್ಷರಾ ಗುವ ಮೊದಲಿಂದಲೇ ಅವರಿಗೆ ಪರಿಚಿತರು. ಅವರು ಶ್ರೀಮಾತೆ ಯವರನ್ನೂ, ರಾಮಕೃಷ್ಣರ ಸಂನ್ಯಾಸಿ ಶಿಷ್ಯರನ್ನೂ ಕಂಡಿದ್ದರು. ಆದರೆ ವಿಧ್ಯುಕ್ತವಾದ ದೀಕ್ಷೆಯನ್ನು ಪಡೆಯುವ ಅಪೇಕ್ಷೆ ಯಾಗಲಿ, ಸುಯೋಗವಾಗಲಿ ಬಂದಿರಲಿಲ್ಲ. ಈಗ ದೀಕ್ಷೆಗೋಸ್ಕರ ಅವರ ಮನಸ್ಸು ಚಡಪಡಿಸುತ್ತಿತ್ತು. ಹೌರಾದಿಂದ ಕಾಲಿಂಪಾಂಗಿಗೆ ಪತ್ನಿಯೊಡನೆ ಬಂದು ಮಹಾರಾಜರಿಗೆ ತಮ್ಮ ಮನೋಭಿಲಾಷೆ ಯನ್ನು ವ್ಯಕ್ತಪಡಿಸಿದರು. ಅವರ ಸಹಧರ್ಮಿಣಿಯವರು ಸಹ ಈ ಹಿಂದೆಯೇ ಮಹಾರಾಜರಿಂದ ದೀಕ್ಷಿತರಾಗಿದ್ದರು. ವಿರಜಾ ನಂದರು ಸಾನಂದದಿಂದ ಆತನನ್ನು ಭಗವಂತನ ಚರಣಗಳಿಗೆ ಅರ್ಪಿಸಿದರು. ಒಂದೇ ಗುರುವಿನ ಚರಣಾಶ್ರಯವನ್ನು ಪಡೆದ ಆ ದಂಪತಿಗಳ ಆನಂದಾತಿಶಯವೇನು ! ಆತನು ಒಳ್ಳೆಯ ಗಾಯಕನಾದ್ದರಿಂದ ಹೃದಯತುಂಬಿ ಒಂದಾದ ಮೇಲೊಂದು ಹಾಡನ್ನು ಹಾಡಿ ಆ ನಿರ್ಜನವಾದ ಹಿಮಾಲಯವು ಅನುರಣಿತ ವಾಗುವಂತೆ ಮಾಡಿದರು. ಮಹಾರಾಜರು ಮೇಲಿನ ಕೊಠಡಿ ಯಲ್ಲಿ ಕುಳಿತು ಕೇಳುತ್ತ, ''ವಾಹ್! ಘನವಾಗಿ ಹಾಡುತ್ತಿದ್ದಾ ನಲ್ಲ'' ಎಂದು ಪ್ರಶಂಸಿಸಿದರು. ಆಕೆಯಾದರೋ ಪಾಕಪ್ರವೀಣೆ. ಅಲ್ಲಿರುವಷ್ಟು ದಿನವೂ ವಿವಿಧ ಭಕ್ಷ್ಯಗಳನ್ನು ಮಾಡಿ ಶ್ರೀಗುರು ವಿಗೂ, ಇತರ ಸಾಧುಗಳಿಗೂ ತಮ್ಮ ಪಾಕಸೇವೆಯನ್ನು ಸಲ್ಲಿಸಿ ದರು. ಜನ್ಮಾಷ್ಟಮಿಯಂದು ದೀಕ್ಷೆಗಾಗಿ ಡಾರ್ಜಿಲಿಂಗ್‌ನಿಂದ ದಂಪತಿಗಳಿಬ್ಬರು, ಮಹಿಳೆಯೋರ್ವರು ಮತ್ತು ಸಿಲಿಗುರಿ ಯಿಂದ ಮಹಿಳೆಯೊಬ್ಬರು ಬಂದಿದ್ದರು.

ಶ್ಯಾಮಲಾತಾಲ್‌ಗೆ ಹೋಗುವ ಸಿದ್ಧತೆಯು ನಡೆದಿತ್ತು. ಹಿಂದಿನ ರಾತ್ರಿ ಮಹಾರಾಜರ ಜ್ವರವು ಇದ್ದಕ್ಕಿದ್ದಂತೆ ಹೆಚ್ಚಾ ಯಿತು. ಬೆಳಗ್ಗೆ ಎದ್ದ ಮಹಾರಾಜರಿಗೆ ೧೦೨° ಜ್ವರ, ವಿಪರೀತ ನಿತ್ರಾಣ. ಅವರ ಸೇವಕರು, ''ಮಹಾರಾಜ್, ಶರೀರವು ಹೀಗಿರುವಾಗ ನೀವು ಸುದೀರ್ಘ ಪ್ರಯಾಣವನ್ನು ಕೈಗೊಳ್ಳು ವುದು ಒಳ್ಳೆಯದಲ್ಲ. ಸೀದಾ ಮಠಕ್ಕೆ ಹೋಗೋಣ ನಡೆಯಿರಿ'' ಎಂದು ವಿನಂತಿಸಿಕೊಂಡರು.

''ಮಠಕ್ಕೆ ಹೋದರೆ ಮತ್ತವರು ನನ್ನನ್ನು ಶ್ಯಾಮಲಾ ತಾಲ್‌ಗೆ ಹೋಗಲು ಬಿಡದಿದ್ದರೆ?''

''ಅದನ್ನು ಆಮೇಲೆ ನೋಡಿಕೊಂಡರಾಯಿತು. ನಿಮ್ಮ ಆರೋ ಗ್ಯಕ್ಕೆ ಆದ್ಯತೆ ನೀಡಬೇಕಲ್ಲವೆ? ಮಠಕ್ಕೆ ಹೋಗಿ ಡಾ. ಅಜಿತ ಬಾಬುಗಳಿಂದ ನಿಮ್ಮ ಆರೋಗ್ಯ ತಪಾಸಣೆಯನ್ನು ಮಾಡಿಕೊಳ್ಳು ವುದು ಅತ್ಯಗತ್ಯ. ಆರೋಗ್ಯ ಸುಧಾರಿಸಿದ ನಂತರ ಇ.ಐ.ಆರ್. ರೈಲು ಹಿಡಿದು ಶ್ಯಾಮಲಾತಾಲ್‌ಗೆ ಹೋಗಿಬಿಡೋಣ, ಅದ ರಿಂದ ಹೆಚ್ಚು ಕಷ್ಟವಾಗುವುದಿಲ್ಲ. ಮಠದವರು ಇದಕ್ಕೇನೂ ಅಭ್ಯಂತರ ತೋರುವುದಿಲ್ಲ.''

''ಮಾರ್ಗದಲ್ಲಿನ ಅನೇಕ ಸ್ಥಳಗಳಿಗೆ ಬರುತ್ತೇವೆಂದು ಬರೆ ದಾಗಿತ್ತಲ್ಲ. ಜಲ್ಪಾಯ್‌ಗುಡಿ, ದಿನಾಜ್‌ಪುರ್, ಕಾಟಿಹಾರ್, ಲಕ್ನೌ, ಶಾಜಹಾನ್‌ಪುರ್‌ಅಲ್ಲಿಯ ಭಕ್ತರೆಲ್ಲ disappoint ಆಗುವುದಿಲ್ಲವೆ? (ನಿರಾಶರಾಗುವುದಿಲ್ಲವೆ?)''

''ಈಗಲೇ ಟೆಲಿಗ್ರಾಂ ಮಾಡುತ್ತೇನೆ. ಅವರೆಲ್ಲ ನಿರಾಶೆಗೊಂ ಡರೆ ಏನು ತಾನೇ ಮಾಡಲಾದೀತು? ನೀವು ಹೀಗೆ ಹಠಾತ್ತಾಗಿ ಅಸ್ವಸ್ಥರಾಗುವಿರೆಂದು ಯಾರು ತಾನೇ ಬಲ್ಲರು?''

''ಸರಿ, ಹಾಗೇ ಮಾಡು.''

ಬದಲಾದ ಪ್ರಯಾಣದ ವಿಷಯ ತಿಳಿಸಲು ಮಹಾರಾಜರ ಸೇವಕರು ೭-೮ ಟೆಲಿಗ್ರಾಂ ಫಾರಂಗಳನ್ನು ಹಿಡಿದು ಅಂಚೆ ಕಛೇ ರಿಗೆ ನಡೆದರು. ಜಲ್ಪಾಯ್‌ಗುಡಿಯಲ್ಲಿ ಭಕ್ತರು ತುಂಬ ಉತ್ಸಾಹ ದಿಂದ ಮಹಾರಾಜರನ್ನು ಸ್ವಾಗತಿಸಿ, ನಿಲ್ದಾಣದಿಂದ ಆಶ್ರಮಕ್ಕೆ ಕರೆದೊಯ್ಯಲೆಂದು ಬಂದವರಿಗೆ ತಿಳಿದುಬಂದದ್ದೇನೆಂದರೆ, 'ಮಹಾರಾಜರು ಆಶ್ರಮಕ್ಕೆ ಬರುವುದೇನೋ ಖಚಿತ, ಆದರೆ ಕೇವಲ ಮೂರು ಗಂಟೆಗಳಿಗೋಸ್ಕರ ಅಷ್ಟೇ! ಮುಂದಿನ ರೈಲಿನಲ್ಲೇ (ಡಾರ್ಜಿಲಿಂಗ್ ಮೇಲ್) ಸಿಯಾಲ್ದಾಕ್ಕೆ ಹೊರಟು ಬಿಡುವರು' ಎಂದು. ದಿನಾಜ್‌ಪುರವನ್ನು ನೈರಾಶ್ಯ ಭಾವವು ಆವರಿಸಿತು. ಹಿಂದಿನ ಕಾರ್ಯಕ್ರಮದ ಪ್ರಕಾರ ವಿರಜಾನಂದರು ಅಲ್ಲಿ ಮೂರು ದಿನಗಳು ತಂಗುವ ವ್ಯವಸ್ಥೆಯಾಗಿತ್ತು. ಅನೇಕ

ದೀಕ್ಷಾರ್ಥಿಗಳೂ ಸಹ ಬಹಳ ತವಕದಿಂದ ಕಾಯುತ್ತಿದ್ದರು. ಭಕ್ತರೆಲ್ಲರೂ ಸೇರಿ ಬಾಳೆಕಂಬ, ತಳಿರುತೋರಣಗಳನ್ನು ಸಿದ್ಧ ಪಡಿಸಿದ್ದರು. ಎರಡು ಬಾಳೆಕಂಬಗಳನ್ನು ಅಲ್ಲಿಯ ಭಕ್ತರು ಕತ್ತರಿಸದೆ ಹಾಗೆ ಇಟ್ಟಿದ್ದರಂತೆ, 'ಮಹಾರಾಜರು ಬರುವವರೆಗೂ ನಾವು ನಮ್ಮ ಹೃದಯದ ಆಸೆಯನ್ನು ಪೋಷಿಸಿಕೊಂಡು ಬಂದಂತೆ, ಈ ಬಾಳೆ ಗಿಡಗಳನ್ನು ಸಹ ಪೋಷಿಸುವೆವು' ಎಂದಿದ್ದರು ಎಂಬುದು ನಂತರ ಪತ್ರದಿಂದ ತಿಳಿದುಬಂತು. ಆದರವರ ಆಸೆ ನೆರವೇರಲು ನಾಲ್ಕು ವರ್ಷಗಳ ಪ್ರತೀಕ್ಷೆ ಮಾಡಬೇಕಾಯಿತು. ಮಹಾರಾಜರು ೧೯೪೪ರ ನವೆಂಬರ್‌ನಲ್ಲಿ ದಿನಾಜ್‌ಪುರಕ್ಕೆ ಹೋಗಿ, ಅಲ್ಲಿ ಏಳುದಿನಗಳು ತಂಗಿದ್ದರು.

ಮಹಾರಾಜರು ಸೆಪ್ಟೆಂಬರ್ ೧ ರಂದು (೧೯೪೦) ಮಠವನ್ನು ತಲುಪಿದರು. ಅಂದೇ ಸಂಜೆ ಡಾ. ಅಜಿತ್ ರಾಯ್ ಚೌಧುರಿಯವರು ಬಂದು ಅವರನ್ನು ಪರೀಕ್ಷಿಸಿ, 'ಹೃದಯವು ಸ್ವಲ್ಪ ಹಿಗ್ಗಿದಂತೆ (heart enlargement) ತೋರುತ್ತಿದೆ' ಎಂದರು. ವಿರಜಾನಂದರು ನಗುತ್ತ ಹೇಳಿದರು, ''ಮಹಾಶಯರೇ ನಾನಂತೂ ಶ್ಯಾಮಲಾತಾಲ್‌ಗೆ ಹೋಗಿಯೇ ತೀರುವೆ.''

''ಹ್ಞಾ, ಖಂಡಿತ. ನಾವೇನು ನಿಮ್ಮನ್ನು ಕಟ್ಟಿಡಲು ಸಾಧ್ಯವೆ? ಆದರೆ ಈ ಸ್ಥಿತಿಯಲ್ಲಿ ಹೋಗಲಾಗದು. ಕೆಲವೊಂದು ದಿನ ಸಂಪೂರ್ಣ ವಿಶ್ರಾಂತಿಯಲ್ಲಿದ್ದು ನಂತರ ಹೋಗುವಿರಂತೆ. (ಅಜಿತ್ ರಾಯ್ ವಿರಜಾನಂದರ ಸಮವಯಸ್ಕರೇ. ಇವರು ಪೂಜ್ಯ ಶಿವಾನಂದರಿಗೆ ಚಿಕಿತ್ಸೆಯನ್ನು ನೀಡಿದ್ದರು. ಆಗಿನಿಂದ ಮಠದೊಂದಿಗೆ ನಿಕಟ ಸಂಪರ್ಕವನ್ನಿರಿಸಿಕೊಂಡಿದ್ದರು. ಸ್ವಾಮಿ ಶುದ್ಧಾನಂದರೂ ಸಹ ಇವರ ಚಿಕಿತ್ಸೆಯನ್ನು ದೀರ್ಘಕಾಲ ಪಡೆದಿದ್ದರು).

''ಎಷ್ಟು ದಿನ ವಿಶ್ರಾಂತಿ ಪಡೆಯಬೇಕು?'' ವಿರಜಾನಂದರ ಪ್ರಶ್ನೆ.

''ಹತ್ತು ದಿನವೂ ಆಗಬಹುದು, ಒಂದು ತಿಂಗಳೂ ಆಗಬಹುದು, ಆರು ತಿಂಗಳೂ ಆಗಬಹುದು.''

''ಓ! ಹಾಗಾದರಾಯಿತು! ಉಫ್! ಮಠಕ್ಕೆ ಬರದೆ ರೈಲು ಹಿಡಿದು ಅಲ್ಲಿಗೇ ನೇರವಾಗಿ ಹೋಗಿದ್ದರೇನೇ ಚೆನ್ನಾಗಿತ್ತು. ನಿಮ್ಮ ಹಿಡಿತಕ್ಕೆ ಬಿದ್ದರೆ ನನಗಿನ್ನು ಗತ್ಯಂತರವಿಲ್ಲ'' ಎಂದರು.

ಆದರೆ ಆರು ತಿಂಗಳೇನೂ ಬೇಕಾಗಲಿಲ್ಲ. ಹತ್ತು ದಿನಗಳ ಪೂರ್ಣ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಂತೆ ಅವರ ಆರೋಗ್ಯವು ನಿರೀಕ್ಷಿಸಿದ್ದಕ್ಕಿಂತ ಹೆಚ್ಚಾಗಿ ಸುಧಾರಿಸಿತ್ತು. ಸೆಪ್ಟೆಂಬರ್ ೧೧ರಂದು ರೈಲು ಹಿಡಿದು, ಕಾಶಿಯಲ್ಲಿ ಎರಡು ದಿನ ಉಳಿದುಕೊಂಡಿದ್ದು, ೧೫ನೇ ಸೆಪ್ಟೆಂಬರ್ (೧೯೪೦) ಶ್ಯಾಮಲಾತಾಲ್ ತಲುಪಿದರು.

ಮಹಾರಾಜರು ಮುಂಬೈನಲ್ಲಿದ್ದಾಗ ಮಿ. ಡ್ಯಾಡಿಯವರು ಅವರ ವೈಯಕ್ತಿಕ ಆವಶ್ಯಕತೆಗೆಂದು ೫೦೦ ರೂ.ಗಳ ಚೆಕ್ಕನ್ನು ಕೊಟ್ಟಿದ್ದರು. ಶ್ಯಾಮಲಾತಾಲಿನಲ್ಲಿ ವಿರಜಾನಂದರು ಉಳಿದುಕೊಳ್ಳುತ್ತಿದ್ದ ನೆಲ ಅಂತಸ್ತಿನ ಬಂಗಲೆಯ ಮೇಲೆ ಮತ್ತೊಂದು ಅಂತಸ್ತನ್ನು ಕಟ್ಟುವ ಯೋಜನೆಯಿತ್ತು. ಈ ಹಣ ದೊರಕಿದ್ದೇ ವಿರಜಾನಂದರು ಮಠದ ಮೂಲಕ ಶ್ಯಾಮಲಾತಾಲ್ ಆಶ್ರಮದ ಮುಖ್ಯಸ್ಥರಾದ ಅಪೂರ್ವಾನಂದರಿಗೆ ತಮ್ಮ ಯೋಜನೆಯನ್ನು ಪೂರ್ಣಗೊಳಿಸಬೇಕೆಂದು ತಿಳಿಸಿದ್ದರು. ಅವರೂ ಸಹ ಅದೇ ಪ್ರಕಾರ ಕೆಲವೇ ತಿಂಗಳುಗಳಲ್ಲಿ ಬಹು ಶ್ರಮವಹಿಸಿ ಮೇಲಂತಸ್ತಿನ ಮನೆಯನ್ನು ಅಚ್ಚುಕಟ್ಟಾಗಿ ಕಟ್ಟಿಸಿದರು. ಇದನ್ನು ಕಂಡು ಮಹಾರಾಜರಿಗೆ ತುಂಬ ಖುಷಿಯಾಯಿತು. ಹೇಳಬೇಕೆಂದರೆ ಆ ೫೦೦ ರೂ.ಗಳು ಸಾಕಾಗಲಿಲ್ಲ, ಸುಮಾರು ಒಂದು ಸಾವಿರ ರೂ.ಗಳು ಬೇಕಾದವು.

ಮೇಲಂತಸ್ತಿನ ನಡುವಿನ ದೊಡ್ಡ ಕೊಠಡಿಯು ಮಹಾರಾಜರು ಇರುವುದಕ್ಕೋಸ್ಕರ, ಪಕ್ಕದ ಚಿಕ್ಕ ಕೊಠಡಿಯು ಸಾಮಾನುಗಳನ್ನು ಇಟ್ಟುಕೊಳ್ಳಲು ಮತ್ತು ಊಟಕ್ಕಾಗಿ, ಮತ್ತೊಂದು ಬದಿಯ ಚಿಕ್ಕ ಕೊಠಡಿಯು ಇಬ್ಬರು ಸೇವಕರಿಗಾಗಿ ನಿಯೋಜಿಸಲಾಗಿತ್ತು. ಹಿಂದೆ ಉಪಯೋಗಿಸುತ್ತಿದ್ದ ನೆಲ ಅಂತಸ್ತಿನ ಮನೆಯು ಅತಿಥಿಗಳಿಗಾಗಿ ಮೀಸಲಾಯಿತು.

ವಿರಜಾನಂದರ ಕೊಠಡಿಯ ಮುಂದಿನ ವರಾಂಡವು ಗಾಜಿನಿಂದ ಸುತ್ತುವರಿಯಲ್ಪಟ್ಟಿತ್ತು. ಅಲ್ಲಿ ಕುಳಿತು ಉತ್ತರದ ಸೀಮಾರಹಿತ ಪರ್ವತ ಶ್ರೇಣಿಗಳ ಅದ್ಭುತ ದೃಶ್ಯವನ್ನು ವೀಕ್ಷಿಸಬಹುದಾಗಿತ್ತು. ಕೆಲಕೆಲವು ಹಿಮಾಚ್ಛಾದಿತ ಶೃಂಗಗಳನ್ನು ವೀಕ್ಷಿಸಬಹುದಾಗಿತ್ತು. ನಂದಾದೇವಿ ಶೃಂಗವಂತೂ ಎದ್ದು ಕಾಣುತ್ತಿತ್ತು; ಆಕಾಶವು ಶುಭ್ರವಾಗಿದ್ದರೆ ಇನ್ನೂ ಆ ರೀತಿಯ ಅನೇಕ ಶೃಂಗಗಳು ಗೋಚರಿಸುತ್ತಿದ್ದವು. ಮಹಾರಾಜರು ಬೆಳಗ್ಗೆ ಮತ್ತು ಸಂಜೆ ಕೆಲವು ಗಂಟೆಗಳನ್ನು ಅಲ್ಲಿ ಕಳೆಯಲಾರಂಭಿಸಿದರು. ಈ ಸುಪರಿಚಿತ ಪರ್ವತ ಮತ್ತು ಕಾನನಗಳ ಬಳಿಗೆ ಮತ್ತೆ ಹಿಂದಿರುಗುವಂತಾದ್ದರಿಂದ ದೇಹದಲ್ಲಿ ಯಾವುದೇ ರೀತಿಯ ಅಸ್ವಸ್ಥತೆ ಇದೆ ಎಂದೇ ಅನ್ನಿಸುವುದಿಲ್ಲ ಎಂದು ಮಿ. ಡ್ಯಾಡಿಯವರಿಗೆ ಪತ್ರ ಬರೆದರು.

ದಸರೆಯು ಬಂದಿತು. ಆಶ್ರಮವಾಸಿಗಳೆಲ್ಲ ಒಟ್ಟಾಗಿ ದೇವಿ ಸಂಕೀರ್ತನೆಗಳನ್ನು ಹಾಡಿ, ವಿಶೇಷವಾದ ನೈವೇದ್ಯವನ್ನು ಜಗದಂಬೆಗೆ ಅರ್ಪಿಸಿ, ಪ್ರಸಾದ ಸ್ವೀಕರಿಸಿ ಸಪ್ತಮಿ, ಅಷ್ಟಮಿ, ನವಮಿಗಳನ್ನು ಆಚರಿಸಿದರು. ವಿಜಯದಶಮಿಯ ಸಮಾರಂಭವು ವಿರಜಾನಂದರ ಕೊಠಡಿಯಲ್ಲೇ ನಡೆಯಿತು. ಪ್ರತಿಯೊಬ್ಬರನ್ನೂ ಅವರು ಆಲಂಗಿಸಿಕೊಂಡರು; ತಾವೇ ಸ್ವತಃ ಸಿಹಿಯನ್ನು ಹಂಚಿದರು. ಇದಾದ ನಂತರ ತುಂಬ ಹೊತ್ತಿನವರೆಗೆ ಭಜನೆ ನಡೆಯಿತು. ದಸರೆಯ ನಂತರ ಕಾಲೀಪೂಜೆ, ಜಗದ್ಧಾತ್ರೀ ಪೂಜೆ, ಮತ್ತು ರಾಸಪೂರ್ಣಿಮೆಗಳೂ ಸಹ ಅದೇ ರೀತಿ ನಡೆದವು.

*(ಮುಂದುವರಿಯುವುದು)*